ಪಿ.ಡಬ್ಲ್ಯೂ-1

**ದಿನಾಂಕ 19-03-2025 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆ : ಶ್ರೀ.ಎಮ್.ಎ.ಎಚ್ ವಕೀಲರಿಂದ ವಾದಿ ಪರವಾಗಿ**

ನನ್ನ ಮುಂದುವರೆದ ಮುಖ್ಯವಿಚಾರಣೆಯ ಪ್ರಮಾಣಪತ್ರ ಸಲ್ಲಿಸಿದ್ದು, ಅದನ್ನು ತಯಾರಿಸಲು ಗೌರವಾನ್ವಿತ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯಗಳು ಸರಿಯಾಗಿರುತ್ತವೆ ಮತ್ತು ಸತ್ಯವಾಗಿರುತ್ತವೆ ಎಂದು ಈ ಮೂಲಕ ಪ್ರಮಾಣೆಸಿಕರಿಸುತ್ತೇನೆ.

ನಾನು ಈಗ ದಿಃ21.10.2022 ರಂದು 8 ನೇ ಪ್ರತಿವಾದಿಗೆ ಮೊದಲನೇ ಪ್ರತಿವಾದಿ ಹಾಗೂ ಆತನ ಹೆಂಡತಿ ಮತ್ತು ಮಕ್ಕಳು ಬರೆದುಕೊಟ್ಟ ಕ್ರಯ ದಸ್ತಿನ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿಪಿ-6 ಎಂದು, ದಿಃ15.10.2020 ರಂದು 6 ನೇ ಪ್ರತಿವಾದಿಗೆ 1 ನೇ ಪ್ರತಿವಾದಿ, ಆತನ ಹೆಂಡತಿ ಮತ್ತು ಮಗ ಬರೆದುಕೊಟ್ಟ ಕ್ರಯದಸ್ತಿನ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿಪಿ-7 ಎಂದು, ದಿಃ21.10.2022 ರಂದು 4 ನೇ ಪ್ರತಿವಾದಿಗೆ ಮೊದಲನೇ ಪ್ರತಿವಾದಿ ಮತ್ತು ಆತನ ಹೆಂಡತಿ ಮಕ್ಕಳು ಬರೆದುಕೊಟ್ಟ ಕ್ರಯದಸ್ತಿನ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿಪಿ-8 ಎಂದು, ದಿಃ15.10.2020 ರಂದು 5 ನೇ ಪ್ರತಿವಾದಿಗೆ ಮೊದಲನೇ ಪ್ರತಿವಾದಿ, ಆತನ ಹೆಂಡತಿ ಮತ್ತು ಮಗ ಬರೆದುಕೊಟ್ಟ ಕ್ರಯದಸ್ತಿನ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿಪಿ-9 ಎಂದು, ದಿಃ21.10.2022 ರಂದು 7 ನೇ ಪ್ರತಿವಾದಿಗೆ 1 ನೇ ಪ್ರತಿವಾದಿ, ಆತನ ಹೆಂಡತಿ ಮತ್ತು ಮಕ್ಕಳು ಬರೆದುಕೊಟ್ಟ ಕ್ರಯದಸ್ತಿನ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಯಿತು. ಅದ್ದರಿಂದ ದಾವೆಯಲ್ಲಿ ಕೋರಿದಂತೆ ಡಿಕ್ರಿ ಆಗಬೇಕಾಗಿ ವಿನಂತಿ.

ಪ್ರತಿವಾದಿ ಪರ ವಕೀಲರು ಹಾಜರ ಇದ್ದು, ಪಾಟೀ ಸವಾಲು ಮಾಡಲು ಸಮಯವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ